ಓ.ಎಸ್.ನಂ. 8804/2015
ಪಿ.ಡಬ್ಲ್ಯೂ.01

**<u>ದಿಃ01-09-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**ಪಾಟಿಸವಾಲು ಃ** ಪ್ರತಿವಾದಿ ಪರ **ಶ್ರೀ.ಎ.ಎ.ಎಸ್. ವಕೀಲರಿಂದ ಃ**

ನಾನು ಈಕೇಸಿನಲ್ಲಿ ದಿಃ**06.09.2018** ರಂದು ನನ್ನ ಮುಖ್ಯ ವಿಚಾರಣೆ ಸಲ್ಲಿಸಿದ್ದೇನೆ, ಉಳಿದ ವಾದಿಯರು ಕೂಡ ಮನ್ನಣೆ ಕೊಟ್ಟಿದ್ದಾರೆ. ಅವರು ಲಿಖಿತವಾಗಿ ಮನ್ನಣೆ ಕೊಟ್ಟಿದ್ದಾರೆ. ಅದನ್ನು ನ್ಯಾಯಾಲಯದಲ್ಲಿ ಹಾಜರು ಮಾಡಿದ್ದೇನೆ. ನಾನು ಡಿಪ್ಲೊಮೋ ಇನ್ ಆಟೋಮೊಬೈಲ್ಸ್ ಮಾಡಿದ್ದೆ, ಅದು ಮುಗಿದಿಲ್ಲ. ನೀವು ಜೀವನೋಪಾಯಕ್ಕೆ ಏನು ಮಾಡುತ್ತಿದ್ದೀರಿ ಎಂದರೆ ಸಾಕ್ಷಿದಾರ ಬಾಡಿಗೆ ಬರುತ್ತಿದೆ ಎಂದು ಹೇಳುತ್ತಾನೆ. ನನ್ನ ತಾಯಿಯ ಆಸ್ತಿಯಿಂದ ಬಾಡಿಗೆ ಬರುತ್ತಾ ಇದೆ. ಆಸ್ತಿ ನಂ.**9/19**, **4** ನೇ ಮುಖ್ಯರಸ್ತೆ, **5** ನೇ ಕ್ರಾಸ್, ಬಳೆಶೆಟ್ಟಿಪ್ಪ ಕಾಂಪೌಂಡ್, ಬೆಂಗಳೂರು. ಅದು ಶೀಟ್ ಬಿಲ್ಡಿಂಗ್ ಇದೆ. ಅದನ್ನು ಇಂಡಸ್ಟ್ರಿಯಲ್ ಉದ್ದೇಶಕ್ಕೆ ಬಾಡಿಗೆ ಕೊಟ್ಟಿದೆ. ಈ ಆಸ್ತಿ ನನ್ನ ತಾಯಿಗೆ ನನ್ನ ತಂದೆಯವರು ಮಾಡಿದ ದಾನಪತ್ರದ ಮುಖಾಂತರ ಬಂದಿದೆ. ಈ ಆಸ್ತಿಯನ್ನು ದಾನಪತ್ರದಲ್ಲಿ ಸೇರ್ಪಡಿಸಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ಆದಾಯ ತೆರಿಗೆ ಪಾವತಿಯಲ್ಲಿ ನನ್ನ ಉದ್ಯೋಗ ವ್ಯವಹಾರ ಎಂದು ಹೇಳಿದ್ದೇನೆ. ನಾನು ರಿಯಲ್ ಎಸ್ಟೇಟ್ ಉದ್ಯೋಗ ಮಾಡುತ್ತಿದ್ದೇನೆ. ನಾನು ಸಿವಿಲ್ ಕಾಂಟ್ರಾಕ್ಟ್ ಮಾಡಿದ್ದೇನೆ. ಸಿವಿಲ್ ಕಾಂಟ್ರಾಕ್ಟ್ ಅನ್ನು ಇಲ್ಲಿಯವರೆಗೂ ಮಾಡುತ್ತಿದ್ದೇನೆ. ನನ್ನ ತಂದೆಯವರು ಜೀವಿತ ಕಾಲದಲ್ಲಿ ಅವರು ವ್ಯವಸಾಯ ಮಾಡುತ್ತಿದ್ದರು, ಮತ್ತು ಬಾಡಿಗೆ ಹಣ ಬರುತ್ತಿತ್ತು. ನನ್ನ ತಂದೆಯವರು ಒಳ್ಳೆ ಕಾಂಟ್ರಾಕ್ಟರ್ ಎಂದು ಹೆಸರುವಾಸಿಯಾಗಿದ್ದರು

ಎಂದರೆ ಸರಿಯಲ್ಲ. ನನ್ನ ತಂದೆಯವರು ಕೆಲವು ಬಡಾವಣೆಗಳನ್ನು ಅಭಿವೃದ್ಧಿ ಮಾಡಿದ್ದರು ಎಂದರೆ ಸರಿ . ಅವರು ಬಡಾವಣೆ ಡೆವಲಪ್ ಮಾಡಿದ್ದಾರೆ ಅದರೆ ಲೈಸೆನ್ಸ ಹೊಂದಿರಲಿಲ್ಲ. ರಾಜಾಜಿನಗರದಲ್ಲಿ ಇಂಡಸ್ಟ್ರಿಯಲ್ ಶೆಡ್ ಗಳು ಒಟ್ಟು 25 ಇವೆ. ಬಾಡಿಗೆ ಹಣವನ್ನು ನಾವು ಮತ್ತು ಪ್ರತಿವಾದಿ ತೆಗೆದುಕೊಳ್ಳುತ್ತಿದ್ದೇವೆ. ನಾವು ಒಟ್ಟು 5 ಶೆಡ್ ಗಳಿಂದ ಬಾಡಿಗೆ ವಸೂಲಿ ಮಾಡುತ್ತಿದ್ದೇವೆ. ಕ್ರಯಪತ್ರ ಮತ್ತು ದಾನಪತ್ರಗಳನ್ನು ನೊಂದಣಿ ಮಾಡಿಸಿದ್ದೇನೆ. ನಾನು ಯಾವುದೇ ಆಸ್ತಿಯನ್ನು ಮಾರಾಟ ಮಾಡಿಲ್ಲ. ಒಟ್ಟು 25 ಶೆಡ್ ಗಳಲ್ಲಿ ಎಷ್ಟು ಜನ ಬಾಡಿಗೆದಾರರು ಇದ್ದಾರೆ ಎಂದರೆ ಸಾಕ್ಷಿದಾರ ಬಾಡಿಗೆ ಪ್ರತಿವಾದಿಗಳು ತೆಗೆದುಕೊಳ್ಳುತ್ತಾರೆ ಅವರನ್ನು ಕೇಳಬೇಕು ಎಂದು ಹೇಳುತ್ತಾರೆ. ನನ್ನ ತಾತನ ಹೆಸರು ಚಿಕ್ಕಬೋರಣ್ಣ ಅಲಿಯಾಸ್ ಬಳೆಶೆಟ್ಟಪ್ಪ. ನನ್ನ ತಾತನ ವೃತ್ತಿ ವ್ಯವಸಾಯ ಆಗಿತ್ತು. ನನ್ನ ಮುತ್ತಾತನ ಹೆಸರು ಕರಿಯಣ್ಣ. ಕರಿಯಣ್ಣನಿಗೆ ಒಟ್ಟು 2 ಗಂಡುಮಕ್ಕಳಿದ್ದರು. ನನ್ನ ತಾತನಿಗೆ ಒಟ್ಟು 5 ಜನ ಮಕ್ಕಳು ಅದರಲ್ಲಿ 3 ಜನ ಗಂಡುಮಕ್ಕಳು ಮತ್ತು 2 ಹೆಣ್ಣುಮಕ್ಕಳು. ನನ್ನ ತಾತ ಮತ್ತು ಅವರ ಸಹೋದರ ನಡುವೆ ದಿಃ20.09.1972 ರಂದು ಒಂದು ಪಾಲು ವಿಭಾಗ ಪತ್ರ ಆಗಿದೆ ಎಂದರೆ ಸರಿ. ನನ್ನ ತಂದೆಯವರಿಗೆ ತುಮಕೂರಿನಲ್ಲೂ ಸಹ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ತುಮಕೂರಿಗೆ ನನ್ನ ತಂದೆಯವರು ನಮ್ಮ ಅಜ್ಜಿ ಮನೆ ಇತ್ತು, ಅಲ್ಲಿಗೆ ಹೋಗುತ್ತಿದ್ದರು. ನನ್ನ ತಂದೆಯವರು ತುಮಕೂರಿನಲ್ಲೂ ಕೂಡ ಬಡಾವಣೆ ಮಾಡಿದ್ದರು ಎಂದರೆ ಸರಿ. ತುಮಕೂರಿನಲ್ಲಿ ಅವರು 3 ಆಸ್ತಿಗಳನ್ನು ಖರೀದಿ

ಮಾಡಿದ್ದಾರೆ. ನನ್ನ ತಂದೆಯವರು ದಿಃ29.05.2004 ರಂದು ತೀರಿಕೊಂಡಿದ್ದಾರೆ. ಅವರು ಸಾಯುವಾಗ ಮನೆಯಲ್ಲಿ ಇದ್ದರು. ಅವರಿಗೆ ಆರೋಗ್ಯವಾಗಿದ್ದರು, ಆದರೆ ಅವರಿಗೆ ಹೃದಯಾಘಾತವಾಗಿ ತೀರಿಹೋದರು. ನನ್ನ ಬಾವಂದಿರು 3 ಜನ ಸಂಬಂಧಿಕರು. ಪ್ರತಿವಾದಿಯರು ಹಾಕಿದ ಪ್ರತಿವಾದ ಪತ್ರವನ್ನು ಓದಿದ್ದೇನೆ. ನನ್ನ ದೊಡ್ಡ ಬಾವ ಪೋಲೀಸ್ ಕೆಲಸದಲ್ಲಿದ್ದರು, ಈಗ ನಿವೃತ್ತಿ ಹೊಂದಿದ್ದಾರೆ. 2 ನೆಯವರು ಇಂಡಸ್ಟ್ರಿ ನೋಡಿಕೊಳ್ಳುತ್ತಿದ್ದಾರೆ. 3 ನೇಯವರು ಬಿಲ್ಡರ್ ಇದ್ದಾರೆ. 3 ನೇ ಬಾವನ ಹೆಸರು ಕಮಲೇಶ್. ಅವರು 10 ವರ್ಷಗಳಿಂದ ಬಿಲ್ಡರ್ ಕೆಲಸ ಮಾಡುತ್ತಿದ್ದಾರೆ. 10 ವರ್ಷಕ್ಕಿಂತ ಮುಂಚೆ ಅವರು ಗ್ರಾನೈಟ್ ಬ್ಯುಸಿನೆಸ್ ಮಾಡುತ್ತಿದ್ದರು. ಪ್ರತಿವಾದ ಪತ್ರದ 11 ನೇ ಪ್ಯಾರಾದಲ್ಲಿ ಹೇಳಿದ ಆಸ್ತಿ ನಂ.1 ನನ್ನ ತಾಯಿಗೆ ಸಂಬಂಧಪಟ್ಟಿದ್ದು.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಅವಕಾಶ ಕೇಳಿದ್ದು ಅವಕಾಶ ನೀಡಿ ಪಾಟೀಸವಾಲನ್ನು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಸಾಬಪ್ಪ)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**

**ಓ.ಎಸ್.ನಂ. 8804/2015**
**ಪಿ.ಡಬ್ಲ್ಯೂ.01**